ವಿಮಾನ ನಿಲ್ದಾಣಕ್ಕೆ ಹೊರಟ. ಯಾವಾಗಲೂ ಹಾಸ್ಯೋಕ್ತಿಗಳಿಂದ ನಗಿಸುತ್ತಿದ್ದ ಮನುಷ್ಯ ಆ ದಿನ ಯಾಕೋ ಯಾವುದೋ ಸುದೀರ್ಘವಾದ ಯೋಚನೆಯಲ್ಲಿದ್ದುದು ಸಹಾಯಕನಿಗೆ ಅರ್ಥವಾಗಲಿಲ್ಲ. ಹತ್ತು ನಿಮಿಷಗಳ ನಂತರ ಹಠಾತ್ತನೆ ವಾಹನವನ್ನು ಹಿಂದಕ್ಕೆ ತಿರುಗಿಸಲು ಹೇಳಿದ. ಎಲ್ಲರೂ ಆಶ್ಚರ್ಯಗೊಂಡರು. ಯಾಕೆಂದು ಕೇಳಿದ ಸಹಾಯಕ.

"ಎಲ್ಲೋ ಏನೋ ತಪ್ಪಾಗಿದೆ. ಏನೆಂದು ಯೋಚಿಸುತ್ತಿದ್ದೆ. ಈಗ ಗೊತ್ತಾಯಿತು. ಮದುಮಗಳಿಗೆ ಗಲ್ಲದ ಮೇಲೆ ಎಡಭಾಗದಲ್ಲಿ ಚುಕ್ಕಿ ಇಟ್ಟೆ. ಆ ಹುಡುಗಿಯದು ಕೋಲುಮುಖ. ಬಲಗಡೆ ಚುಕ್ಕಿ ಇಟ್ಟರೇನೇ ಚೆನ್ನಾಗಿರುತ್ತದೆ. ಅದಕ್ಕೇ ಕಾರು ಹಿಂದಕ್ಕೆ ತಗೊಂಡು ಹೋಗ್ತಿರೋದು" ಎಂದ.

"ಸಾರ್. ಅದು ಗುಜರಾತಿ ಮದುವೆ. ಮದುವೆಯ ಅರ್ಧ ಸಮಯ ಮದುಮಗಳು ತಲೆಯ ಮೇಲೆ ಮುಸುಕಿನೊಂದಿಗೆ ಕುಳಿತಿರುತ್ತಾಳೆ. ಬಂದವರೆಲ್ಲರೂ ದೂರದಲ್ಲಿ ಕೂತಿರುತ್ತಾರೆ. ಗಲ್ಲದ ಮೇಲಿನ ಚುಕ್ಕಿ ಯಾವ ಕಡೆ ಇದೆ ಎಂದು ಯಾರು ನೋಡುತ್ತಾರೆ? ಬಲಗಡೆ ಇಲ್ಲದೇ ಎಡಗಡೆ ಇದ್ದರೆ ಚೆನ್ನಾಗಿರುತ್ತಿತ್ತು ಅಂತ ಯಾರೆನ್ನುತ್ತಾರೆ?" ಎಂದ ಸಹಾಯಕ.

"ನಾನೇ ಅಂದುಕೊಳ್ಳುತ್ತೇನೆ" ಕ್ಲುಪ್ತವಾಗಿ ಎಂದ ಆ ಕಲಾಕಾರ.

ಸ್ವಾಮೀಜಿ ಉಪನ್ಯಾಸ ಆ ರೀತಿ ಸಾಗಿತ್ತು. ನನ್ನ ಹೆಂಡತಿ ಶ್ರದ್ಧೆಯಿಂದ ಕೇಳಿಸಿಕೊಂಡಳು. ನನಗಂತೂ ಆತ ಹೇಳಿದ್ದು ಒಂದು ಚೂರೂ ಅರ್ಥವಾಗಲಿಲ್ಲ. ಸಭೆಯಿಂದ ಮನೆಗೆ ಬರುವಾಗ ಅದೇ ಮಾತು ಹೇಳಿದೆ.

"ಚೆನ್ನಾಗಿ ಹೇಳಿದರು ಹಿರಿಯರು" ಎಂದಳು ನನ್ನಾಕೆ.

ತಕ್ಷಣ ಮಾತು ಬದಲಾಯಿಸಿ, "ನೋಡಿದೆಯಾ ಮತ್ತೆ. ಅದಕ್ಕೇ ಇಂತಹ ಪ್ರವಚನಗಳನ್ನು ಕೇಳೋಕ್ಕೆ ಬಾ ಅಂತೀನಿ" ಎಂದೆ ಹೆಮ್ಮೆಯಿಂದ.

"ಈಗ ತಾನೇ ಏನೂ ಅರ್ಥ ಆಗಲಿಲ್ಲ ಅಂತಂದೆ?"

ಬೆಚ್ಚಿ, "ಕೇಳಲು ಚೆನ್ನಾಗಿರುತ್ತೆ" ಎಂದೆ.

"ಹೌದು. ಕೇಳಲು ಎಷ್ಟು ಸಲವಾದರೂ ಚೆನ್ನಾಗಿರುತ್ತೆ. ಆಚರಿಸಿದರೆ ಇನ್ನೂ ಚೆನ್ನಾಗಿರುತ್ತೆ. ನಲವತ್ತು ವರ್ಷಗಳಿಂದ ನಾನೂ ಅದನ್ನೇ ಅಲ್ವಾ ಹೇಳ್ತಿರೋದು" ಎಂದಳು.

ನಲವತ್ತು ವರ್ಷಗಳಿಂದ ಅವಳು ನನಗೇನು ಹೇಳುತ್ತಿರುವಳೋ, ನಾನೇನು ಆಚರಿಸಲಿಲ್ಲವೋ ನನಗೆ ಅರ್ಥವಾಗಲಿಲ್ಲ. ಹೇಳಿದೆನಲ್ಲಾ. ಈ ಮಾತುಗಳ ಪ್ರವಚನ ನಿಲ್ಲದು. ಒಟ್ಟಿನಲ್ಲಿ ಹೇಗೋ ಸಾಲ ಮಾಡಿ ಬೆಂಗಳೂರಿಗೆ ಹೋದೆ ಎಂದುಕೊಳ್ಳಿ. ಅದು ಬೇರೆ ವಿಷಯ.

ಆದರೆ ಈಗ ಈ ದೀಪಗಳ ವಿಷಯಕ್ಕೆ ಏನು ಮಾಡೋದು? ಹೇಗೆ ನನ್ನ ಹೆಂಡತಿಯ ಮನವೊಪ್ಪಿಸುವುದು? ಕೈಯಲ್ಲಿ ದುಡ್ಡಿದ್ದಾಗಲೇ ಒಪ್ಪಿರಲಿಲ್ಲ. ಈಗ ಹೇಗೆ ಒಪ್ಪುತ್ತಾಳೆ? ನಮ್ಮ ಗುಂಪಿಗೆ ನಾನೇ ನಾಯಕನಂತಹವನು. ನಾನು ಬರೋದಿಲ್ಲವೆಂದರೆ ಎಲ್ಲರೂ ಗಲಾಟೆ ಮಾಡುತ್ತಾರೆ. ಇದಕ್ಕೇನು ದಾರಿ? ಇನ್ನೊಂದು ತಿಂಗಳು ಮಾತ್ರವೇ ಸಮಯವಿತ್ತು.

ಭಕ್ತರ ಕಷ್ಟಗಳನ್ನು ತೀರಿಸುವವನು ಭಗವಂತನಲ್ಲವೇ? ಮುಂದಿನ ಹತ್ತು ದಿನಗಳಲ್ಲಿ ಶ್ರಾವಣ ಪೌರ್ಣಮಿ. ಆ ಸಮಯದಲ್ಲಿ ನನ್ನ ಮಗ ಐವತ್ತು ಸಾವಿರ ಕಳಿಸಿ ನನಗೆ ಸಹಾಯ ಮಾಡಿದ. ಪ್ರಯಾಣದ ಮಾರ್ಗ ಸುಗಮವಾಗಿತ್ತು. ಹೇಳಿದೆನಲ್ಲಾ. ನನ್ನ ಮಗನೆಂದರೆ ನನಗೆ ಬಹಳ ಹೆಮ್ಮೆ. ಇನ್ನೊಂದು ವಾರದಲ್ಲಿ ಪ್ರಯಾಣ.

***

ಹಾಗೇ ಯೋಚಿಸುತ್ತಾ ಮೋಟರ್ ಬೈಕ್ ಮೇಲೆ ಹೋಗುತ್ತಿದ್ದಾಗ ಚಿಕ್ಕ ಶಬ್ದವೂ, ನಾಲ್ಕು ದಿನಗಳ ನಂತರ ಎಚ್ಚರವೂ ಆಗಿತ್ತು. ದೊಡ್ಡ ಪೆಟ್ಟೇನೂ ಬಿದ್ದಿರಲಿಲ್ಲ. ಆದರೆ ನನ್ನ ದೇಹಕ್ಕೆ ರಕ್ತವನ್ನು ಕೊಡಬೇಕಾಗಿ ಬಂದಿತ್ತು.

ಸ್ವಲ್ಪ ಚೇತರಿಸಿಕೊಂಡ ನಂತರ, ಹಾಸಿಗೆಯ ಪಕ್ಕದಲ್ಲಿ ಕುಳಿತು ಮೋಸಂಬಿಯನ್ನು ಸುಲಿಯುತ್ತಾ "ಅದೃಷ್ಟವಶಾತ್ ದೊಡ್ಡ ಅಪಾಯ ಆಗಲಿಲ್ಲ" ಎಂದಳು ನನ್ನ ಹೆಂಡತಿ.

"ನೋಡಿದೆಯಾ. ನಾನು ನಂಬಿಕೊಂಡ ದೇವರುಗಳ ಮಹಿಮೆ" ಎಂದೆ.

"ಅಷ್ಟು ಪ್ರೀತಿ ದೇವರಿಗೆ ನಿನ್ನ ಮೇಲೆ ಇದ್ದಿದ್ದರೆ ಅಪಘಾತ ಆಗದಂತೆಯೇ ನೋಡಿಕೊಳ್ಳಬಹುದಿತ್ತಲ್ವಾ?" ಎಂದಳು

"ಪ್ರೀತಿ ಎಂದರೆ ಗೊತ್ತಾ?" ಎಂದೆ.

"ಯಾಕೆ ಗೊತ್ತಿಲ್ಲ? ಏತಿಗೆ ವಿರುದ್ಧ ಪದ" ಎಂದಳು. ಅವಳಿಗೆ ಏನಾದರೂ ದಬಾಯಿಸುವಂತಹದ್ದು ಹೇಳಬೇಕೆನ್ನುವಷ್ಟರಲ್ಲಿ ನನ್ನ ಮಗಳು, ಅಳಿಯ, ಮಗ, ಸೊಸೆ ಬಂದರು. ನನ್ನ ಅಳಿಯ "ರಿಕವರ್ ಸೂನ್ ಅಂಕಲ್" ಎಂದು ಹೂಗುಚ್ಛ ನೀಡಿದ. ಮಗಳು ಸೇಬಿನ ಹಣ್ಣುಗಳನ್ನು ತಂದಳು. ನನ್ನ ಮಗ ಒಂದು ಪಟ ನೀಡಿ, "ಹತ್ತಿರ ಇಟ್ಕೋ ಅಪ್ಪ. ಬೇಗನೆ ಗುಣವಾಗುತ್ತೆ" ಎಂದ.

ನಡುವೆ ನನ್ನಾಕೆ ಬಾಯಿ ಹಾಕಿ, "ಕೃಷ್ಣ ಬಹಳ ಮುದ್ದಾಗಿದ್ದಾನಲ್ವಾ?" ಎಂದಳು ಪಟವನ್ನು ನೋಡುತ್ತಾ.

ದೇವರ ಚಿತ್ರ ನಿನಗೆ ಇಷ್ಟವಾಗಿರೋದು ಮೊದಲನೇ ಸಲ, ನನಗೆ ಈ ವಿಷಯ ಇಷ್ಟವಾಯಿತು ಎಂದು ಮನಸ್ಸಿನಲ್ಲಿ ಅಂದುಕೊಂಡೆ. ತಲೆಯ ಪಕ್ಕದಲ್ಲಿಟ್ಟುಕೊಂಡು ದಿನವೂ ಓದುವ ಭಗವದ್ಗೀತೆ ಪುಸ್ತಕದ ನಡುವೆ ಆ ಪಟವನ್ನು ಇಟ್ಟುಕೊಂಡು ನನ್ನ ಮಗನೊಂದಿಗೆ "ಆ ಬೆಟ್ಟದ ಕಾರ್ಯಕ್ರಮ ರದ್ದಾಯಿತಲ್ವೇನೋ... ನಿನ್ನ ಐವತ್ತು ಸಾವಿರ..." ಎಂದು ಹೇಳಲಾರಂಭಿಸಿದಾಗ ಮೋಸಂಬಿ ಸಿಪ್ಪೆ ಬಿಡಿಸುತ್ತಿದ್ದ ನನ್ನ ಹೆಂಡತಿ ಟಕ್ಕನೆ ತಲೆಯೆತ್ತಿ "ಐವತ್ತು ಸಾವಿರ ಎಂಥದ್ದು?" ಎಂದಳು.

ಹೆಂಡತಿಯರಿಗೆ ಹಾವಿನ ಕಿವಿಗಳನ್ನು ನೀಡಿ ಭಗವಂತ ಗಂಡಂದಿರ ಮೇಲೆ ಸೇಡು ತೀರಿಸಿಕೊಂಡಿದ್ದಾನೆ. ನಾನು ಏನೋ ಹೇಳುವಷ್ಟರಲ್ಲಿ ನನ್ನನ್ನು ಕಾಪಾಡುವುದಕ್ಕೇನೋ ಎನ್ನುವಂತೆ ಒಬ್ಬಾತ ನನ್ನ ಮಂಚದ ಬಳಿಗೆ ಬಂದ. ಪೈಜಾಮಾ ಜುಬ್ಬಾ ಧರಿಸಿದ್ದ. ಕಣ್ಣುಗಳಲ್ಲಿ ಪ್ರಶಾಂತತೆಯೂ ಮುಖದ ಮೇಲೆ ನಿರ್ಮಲತೆಯೂ ಇತ್ತು. ಹೆಗಲ ಮೇಲಿನಿಂದ ಒಂದು ಸೆಣಬಿನ ಚೀಲ ಜೋತಾಡುತ್ತಿತ್ತು.

ನನ್ನ ಹೆಂಡತಿ ಸ್ಟೂಲ್ ಮೇಲಿನಿಂದ ಎದ್ದು ನಿಂತು "ಇವರು ಹೆಸರು ಮುರಾರಿ. ಇವರೇ ನಿನಗೆ ರಕ್ತ ಕೊಟ್ಟವರು. ಆ ಸಮಯದಲ್ಲಿ ಇವರು ಬರದೇ ಇದ್ದಿದ್ದರೆ..." ಎಂದು ನಿಲ್ಲಿಸಿದಳು. ಕಣ್ಣುಗಳಿಗೆ ತನ್ನ ಮಂಗಳಸೂತ್ರವನ್ನು ಒತ್ತಿಕೊಳ್ಳುವಳೇನೋ ಎಂದುಕೊಂಡೆ. ಆದರೆ ಅಂತಹದ್ದೇನನ್ನೂ ಮಾಡಲಿಲ್ಲ.

ನಿಜವೇ. ನನ್ನ ಗುಂಪಿನ ರಕ್ತ ಸಾಮಾನ್ಯವಾಗಿ ದೊರಕುವುದಿಲ್ಲ. ನಾನು ಕೈಗಳನ್ನು ಜೋಡಿಸಿ, "ಎಲ್ಲವೂ ಭಗವತ್ ಲೀಲೆ. ನಿಮ್ಮಂಥವರು



ಇನ್ನೂ ಇರೋದರಿಂದಲೇ ಧರ್ಮವು ನಾಲ್ಕು ಕಾಲುಗಳೊಂದಿಗೆ ನಡೆಯುತ್ತಿದೆ. ಮುರಾರಿ ಎಂದರೆ ಕೃಷ್ಣ. ನಿಮ್ಮನ್ನು ದೇವರು ಕಾಪಾಡುತ್ತಾನೆ" ಎಂದೆ.

ಆತ ನಕ್ಕು, "ನನಗೆ ಭಗವಂತನೊಂದಿಗೆ ಸಂಬಂಧವಿಲ್ಲ" ಎಂದರು.

ನನಗೆ ಆಶ್ಚರ್ಯವಾಗಿತ್ತು. ದೇವನಿರುವನೆಂದು ಆಸ್ತಿಕರೂ, ಇಲ್ಲವೆಂದು ನಾಸ್ತಿಕರೂ ಹೇಳುವರೆಂದು ಗೊತ್ತು. ಆದರೆ ಸಂಬಂಧವಿಲ್ಲದವರು ಯಾರೆಂದು ಅರ್ಥವಾಗಲಿಲ್ಲ. ನನ್ನ ಅನುಮಾನವನ್ನು ಅರ್ಥ ಮಾಡಿಕೊಂಡವನಂತೆ "ಸ್ನೇಹ, ಧ್ಯಾನ, ಆರಾಧನೆ, ಪ್ರೀತಿ, ನಂಬಿಕೆ, ತಾದಾತ್ಮ್ಯತೆ, ಸೇವೆ ಎಂದು ಏಳು ರೀತಿಯ ಸಂಬಂಧಗಳೊಂದಿಗೆ ಭಗವಂತ ನಮ್ಮೊಂದಿಗೆ ತನ್ನನ್ನು ತಾನು